

**ಕಿವಿಮಾತು**

**ಜ್ವರದ ತಾಪ ಪೂರ್ತಿ ತಗ್ಗಲಿಲ್ಲವೆಂದು ಪ್ಯಾರಸಿಟಮಾಲ್ ಔಷಧವನ್ನು ದಿನದಲ್ಲಿ ನಾಲ್ಕು ಬಾರಿಗಿಂತ ಹೆಚ್ಚು ಬಾರಿ ಬಳಸಬೇಡಿ. ಪ್ಯಾರಸಿಟಮಾಲ್ ಒಂದು ಸುರಕ್ಷಿತ ಔಷಧವಾಗಿದ್ದರೂ, ನಿಗದಿತ ಪ್ರಮಾಣಕ್ಕಿಂತ ಹೆಚ್ಚು ನೀಡಿದಾಗ ಯಕೃತ್ ಹಾನಿಗೊಳಗಾಗಬಹುದು. ಕೆಲವೊಮ್ಮೆ ಪ್ರಾಣಕ್ಕೂ ಕುತ್ತುಂಟಾಗಬಹುದು.**

ಕೆಲವೊಮ್ಮೆ ನ್ಯುಮೋನಿಯಾ ಮತ್ತು ಮೆದುಳಿನ ಉರಿಯೂತದಂಥ ದುಷ್ಪರಿಣಾಮಗಳುಂಟಾಗಬಹುದು. ಗರ್ಭಿಣಿ ಮಹಿಳೆಯಲ್ಲಿ ರುಬೆಲ್ಲಾ ಸೋಂಕು ಕಾಣಿಸಿಕೊಂಡರೆ ಜನಿಸುವ ಮಗುವಿನಲ್ಲಿ ಬುದ್ಧಿಮಾಂದ್ಯತೆ, ಅಂಧತ್ವ ಮತ್ತು ಕಿವುಡುತನಗಳಂಥ ಸಮಸ್ಯೆಗಳಾಗುವ ಸಾಧ್ಯತೆಯಿರುತ್ತದೆ. ಈ ಮೂರೂ ಸೋಂಕುಗಳು ವೈರಾಣುವಿನ ಸೋಂಕುಗಳಾಗಿರುವುದರಿಂದ ಯಾವುದೇ ನಿರ್ದಿಷ್ಟ ಚಿಕಿತ್ಸೆ ಇರುವುದಿಲ್ಲ ಮತ್ತು ಈ ಮೂರೂ ಸೋಂಕುಗಳನ್ನು ತಡೆಗಟ್ಟಬಲ್ಲಂಥ ಲಸಿಕೆಗಳು ಲಭ್ಯವಿರುತ್ತವೆ. ವೈದ್ಯರ ಸಲಹೆಯ ಮೇರೆಗೆ ಮಗುವಿಗೆ ಕೊಡಿಸಬೇಕು.

### ನ್ಯುಮೋನಿಯಾ

ವಾತಾವರಣದಲ್ಲಿರುವ ಅಡಿನೋ, ಇನ್ ಫ್ಲುಯೆಂಜಾ, ಪ್ಯಾರಾ ಇನ್ ಫ್ಲುಯೆಂಜಾ ಮುಂತಾದ ವೈರಾಣುಗಳು ಹಾಗೂ ನ್ಯುಮೋಕಾಕ್ಕೈ, ಸ್ಟೆಫಲೋಕಾಕ್ಕೈ, ಹಿಮೋಫಿಲಸ್ ಇನ್ ಫ್ಲುಯೆಂಜಾ ಬಿ ಮುಂತಾದ ಬ್ಯಾಕ್ಟೀರಿಯಾಗಳ ಸೋಂಕಿನಿಂದ ಮಕ್ಕಳಲ್ಲಿ ಶ್ವಾಸಕೋಶದ ಉರಿಯೂತ ಉಂಟಾಗಬಹುದು. ಇದನ್ನು ನ್ಯುಮೋನಿಯಾ ಎನ್ನಲಾಗುತ್ತದೆ. ವೈರಾಣು ಮತ್ತು ಬ್ಯಾಕ್ಟೀರಿಯಾಗಳ ನ್ಯುಮೋನಿಯಾವನ್ನು ರೋಗಲಕ್ಷಣಗಳನ್ನಾಧರಿಸಿ ಬೇರ್ಪಡಿಸುವುದು ಕಷ್ಟ. ಶಿಶುಗಳು, ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಲ್ಲಿ ನ್ಯುಮೋನಿಯಾದ ತೀವ್ರತೆ ಹೆಚ್ಚು.

**ಕಿವಿಮಾತು**

**ಪದೇ ಪದೇ ಉಷ್ಣತೆಯನ್ನು ಪರೀಕ್ಷಿಸುತ್ತಾ 101 ಡಿಗ್ರಿ, 102 ಡಿಗ್ರಿ ಎಂದು ತಲೆಕೆಡಿಸಿಕೊಳ್ಳಬೇಡಿ. ಇದರಿಂದ ಅನಗತ್ಯವಾಗಿ ನಿಮ್ಮ ರಕ್ತದೊತ್ತಡ ಹೆಚ್ಚಾಗುತ್ತದೆ. ಉಷ್ಣತೆಯ ಹೆಚ್ಚಳ ಎಷ್ಟೇ ಇದ್ದರೂ ಅದು ಜ್ವರವೇ. ಅದು ಅಪಾಯಕಾರಿ ಮಟ್ಟಕ್ಕಿಂತ ಕಡಿಮೆಯಿರುವಂತೆ ಕಾಳಜಿ ವಹಿಸಬೇಕು ಅಷ್ಟೇ.**

### ರೋಗಲಕ್ಷಣಗಳು

ಚಳಿಜ್ವರ, ಏರುಗತಿಯ ಉಸಿರಾಟ, ಪಕ್ಕೆ ಎಳೆತ, ಶಬ್ದ ಸಹಿತ ಉಸಿರಾಟ, ಚರ್ಮ ನೀಲಿಗಟ್ಟುವುದು, ಮುಂತಾದವು ನ್ಯುಮೋನಿಯಾದ ಲಕ್ಷಣಗಳು. ಎದೆಯ ಎಕ್ಸ್ ರೇ, ಬಿಳಿರಕ್ತಕಣಗಳ ಸಂಖ್ಯೆಯ ಪರಿಮಾಣ ಮುಂತಾದ ಪರೀಕ್ಷೆಗಳಿಂದ ನ್ಯುಮೋನಿಯಾವನ್ನು ಪತ್ತೆಹಚ್ಚಲಾಗುತ್ತದೆ.

ಆ್ಯಂಟಿಬಯೊಟಿಕ್‌ಗಳು, ಆಮ್ಲಜನಕದ ಪೂರೈಕೆ, ನೆಬುಲೈಸೇಷನ್, ಐ ವಿ ದ್ರಾವಣಗಳು ಇತ್ಯಾದಿಗಳು ನ್ಯುಮೋನಿಯಾದ ಚಿಕಿತ್ಸಾವಿಧಾನಗಳು.

ಸರ್ಕಾರದಿಂದ ಉಚಿತವಾಗಿ ನೀಡಲಾಗುವ ಪೆಂಟಾವಲೆಂಟ್, ನ್ಯುಮೋಕಾಕಲ್ ಮತ್ತು ದಡಾರ ಹಾಗೂ ಖಾಸಗಿಯಾಗಿ ನೀಡಲಾಗುವ ಫ್ಲೂ ವಿರುದ್ಧದ ಲಸಿಕೆಗಳು ನ್ಯುಮೋನಿಯಾ ಕಾಯಿಲೆಯನ್ನು ತಡೆಗಟ್ಟಲು ಸಹಕಾರಿ.

### ಕೈ ಕಾಲು ಬಾಯಿ ಕಾಯಿಲೆ

ಸಾಮಾನ್ಯವಾಗಿ ಬೇಸಿಗೆಯಲ್ಲಿ ಕಾಣಿಸಿಕೊಳ್ಳುವ ಕೈ ಕಾಲು ಬಾಯಿ ಕಾಯಿಲೆ (ಎಚ್.ಎಫ್.ಎಂ.ಡಿ), ಕಾಕ್ಸಾಕಿ 'ಎ' ಎಂಬ ವೈರಾಣುವಿನಿಂದ ಉಂಟಾಗುವ ಒಂದು ಸೋಂಕುರೋಗ. ಮಣ್ಣಿನಲ್ಲಿ ಆಟವಾಡುವ ಐದು ವರ್ಷದೊಳಗಿನ ಮಕ್ಕಳಲ್ಲಿ ಇದು ಸಾಮಾನ್ಯ. ಸೋಂಕಿತ ಮಗುವಿನಿಂದ ಇನ್ನೊಂದು ಮಗುವಿಗೆ ನೇರ ಸಂಪರ್ಕದಿಂದಲೂ ಹರಡಬಲ್ಲದು. ಸಾಮಾನ್ಯವಾಗಿ ಸೌಮ್ಯ ಸ್ವರೂಪದಲ್ಲಿರುತ್ತದೆ.

ಜ್ವರದೊಂದಿಗೆ ಬಾಯಿಯ ಸುತ್ತಮುತ್ತ, ಅಂಗೈ ಮತ್ತು ಕಾಲುಗಳಲ್ಲಿ ನೀರುಗುಳ್ಳೆಗಳಾಗುತ್ತವೆ. ಐದಾರು ದಿನಗಳಲ್ಲಿ ನೀರುಗುಳ್ಳೆಗಳು ಬತ್ತಿಹೋಗಿ ಕಾಯಿಲೆ ನಿಯಂತ್ರಣಕ್ಕೆ ಬರುತ್ತದೆ. ಜ್ವರ ನಿವಾರಕಗಳಂಥ ಲಕ್ಷಣವನ್ನಾಧರಿಸಿದ ಚಿಕಿತ್ಸೆಯಷ್ಟೇ ಸಾಕಾಗುತ್ತದೆ.

## ಅಲ್ಪಾವಧಿ ಜ್ವರದ ಇನ್ನಿತರೆ ಸಾಮಾನ್ಯ ಕಾರಣಗಳು

### ಮೂತ್ರಾಂಗ ವ್ಯೂಹದ ಸೋಂಕು

ಜ್ವರ, ಮೈನಡುಕ, ವಾಂತಿ, ಭೇದಿ, ಕಿಬ್ಬೊಟ್ಟೆ ನೋವು, ಪದೇ ಪದೇ ಮೂತ್ರ ವಿಸರ್ಜನೆ, ಮೂತ್ರದಲ್ಲಿ ಉರಿ ಮುಂತಾದವು, ಮೂತ್ರಾಂಗ ವ್ಯೂಹದ ಸೋಂಕಿನ ಕೆಲ ಲಕ್ಷಣಗಳು.

ಸೂಜಿಹುಳು ಬಾಧೆ, ಅತಿ ಚಿಕ್ಕ ಮೂತ್ರನಳಿಕೆ, ಮೂತ್ರವಿಸರ್ಜನೆಯನ್ನು ಬಲವಂತವಾಗಿ ತಡೆಹಿಡಿಯುವುದು, ಜನನೇಂದ್ರಿಯದ ಸುತ್ತಲಿನ ಅನೈರ್ಮಲ್ಯ ಮುಂತಾದ ಕೆಲವು ಕಾರಣಗಳಿಂದ